ಕರ್ನಾಟಕ ಸರ್ಕಾರ

GOVERNMENT OF KARNATAKA

**ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590 002**

ZILLA PANCHAYAT OFFICE, BELGAUM-590 002


ದೂರವಾಣಿ 0831-2407206 ಫ್ಯಾಕ್ಸ್/Fax 0831-2429662

Telephone 0831- e-mail ceo_zp_bgm@nic.in

dsdevbgm@gmail.com


ಕ್ರಸಂ:ಜಿಪಂಬೆ:ಸುವರ್ಣಗ್ರಾಮೋದಯ:ವಿವ:53:2011-12 ದಿನಾಂಕ:09-01-2014.

ವಿಷಯ:ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2013-14 ನೇ ಸಾಲಿನಲ್ಲಿ ವ್ಯತ್ಯಾಸವಾಗಿರುವ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಗಳ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:1.ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012, ದಿನಾಂಕ:04-07-2012.

2.ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:70:ಸುಗ್ರಾಯೋ:2012 ದಿನಾಂಕ:08-10-2012.

3.ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:70:ಸುಗ್ರಾಯೋ:2012 ದಿನಾಂಕ:19-10-2012.

4.ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:114:ಸುಗ್ರಾಯೋ.2012 ದಿನಾಂಕ:08-11-2012.

5.5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯ ಅನುಮೋದಿತ ಕ್ರಿಯಾ ಯೊಜನೆ.

6.ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:27:ಸುಗ್ರಾಯೋ:2011. ದಿನಾಂಕ:03-07-2012.

7.ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:35:ಸುಗ್ರಾಯೋ:2013 ದಿನಾಂಕ:28-12-2013.

8.ಉಪ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್. ಚಿಕ್ಕೋಡಿ, ಗೋಕಾಕ, ಕತ್ತೂರ ಇವರ ಪತ್ರ ದಿನಾಂಕ:

9.ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ.ವಿಭಾಗ ಬೆಳಗಾವಿ ಇವರ ಪತ್ರ ದಿನಾಂಕ:

10.ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ.ವಿಭಾಗ ಚಿಕ್ಕೋಡಿ ಇವರ ಪತ್ರ ದಿನಾಂಕ:

## ಪ್ರಸ್ತಾವನೆ

ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತದ ಯೋಜನೆಯು ದಿನಾಂಕ:29-06-2012 ರಿಂದ ಜಾರಿಗೆ ಬಂದಿರುತ್ತದೆ. ಸುವರ್ಣ ಗ್ರಾಮೋದಯ ಯೋಜನೆಯ ಅನುಷ್ಠಾನ ಕುರಿತು ಸರ್ಕಾರದಿಂದ ರಚಿಸಲಾದ ಮಾರ್ಗಸೂಚಿ ಮತ್ತು ಸರ್ಕಾರಿ ಸುತ್ತೋಲೆಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಇತರೆ ಅಭಿವೃದ್ಧಿ ಇಲಾಖೆಗಳ Convergnce ಹೊರತುಪಡಿಸಿ ಅನುಷ್ಠಾನಗೊಳಿಸಲು ತಿಳಿಸಲಾಗಿದೆ.

ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಿಗೆ ಹಂಚಿಕೆಯಾದ ಅನುದಾನದಲ್ಲಿ ಶೇ.70 ರಸ್ತೆ ಮತ್ತು ಚರಂಡಿಗೆ, ಶೇ. 3 ಘನತ್ಯಾಜ್ಯವಸ್ತು ವಿಲೇವಾರಿಗೆ, ಶೇ.2 ಸೋಲಾರ ಬೀದಿದೀಪ ಅಳವಡಿಸಲು ಹಾಗೂ ಶೇ.10 ಒಂದು ಅಂಗನವಾಡಿ ಕಟ್ಟಡಕ್ಕೆ ಮತ್ತು ಉಳಿದ ಶೇ. 15 ರಷ್ಟು ಅನುದಾನದಲ್ಲಿ ಆದ್ಯತೆ ಹಾಗೂ ಅವಶ್ಯಕತೆ ಮೇರೆಗೆ ಶಾಲಾ ಕಟ್ಟಡಕ್ಕೆ, ಗ್ರಾಮ ಪಂಚಾಯತಿ ಕಟ್ಟಡಕ್ಕೆ, ಗ್ರಂಥಾಲಯ ಕಟ್ಟಡಕ್ಕೆ, ಮಹಿಳಾ ಎಸ್.ಎಚ್.ಜಿ.ಗಳ ವರ್ಕಶೆಡ್, ಬಯಲು ರಂಗಮಂದಿರ ಮತ್ತು ಕೊನೆಯ ಆದ್ಯತೆ ಮೇರೆಗೆ ಸಮುದಾಯ ಭವನ, ಐ.ಇ.ಸಿ. ಚಟುವಟಿಕೆಗೆ ವಿನಿಯೋಗಿಸಬಹುದಾಗಿದೆ.

ಉಲ್ಲೇಖ (2),(3) ಹಾಗೂ (4) ರ ಸರ್ಕಾರದ ಆದೇಶಗಳಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ, ಬೈಲಹೊಂಗಲ, ಚಿಕ್ಕೋಡಿ, ಗೋಕಾಕ, ಖಾನಾಪೂರ, ರಾಯಬಾಗ, ರಾಮದುರ್ಗ, ಸವದತ್ತಿ, ಹುಕ್ಕೇರಿ ಹಾಗೂ ಬೆಳಗಾವಿ ತಾಲೂಕುಗಳ ಒಟ್ಟು 124 ಗ್ರಾಮಗಳನ್ನು ಆಯ್ಕೆಮಾಡಿ ಅನುದಾನ ನಿಗದಿಯಾಗಿದೆ.

ಉಲ್ಲೇಖ (5)ರಲ್ಲಿ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ. ಈಗ ಉಲ್ಲೇಖ (7) ರ ಸರ್ಕಾರದ ಆದೇಶದಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2013-14 ನೇ ಸಾಲಿನಲ್ಲಿ 3 ನೇ ಕಂತಿನ ಅನುದಾನ ರೂ.1300.00 ಲಕ್ಷ ಬಿಡುಗಡೆ ಮಾಡಿರುತ್ತಾರೆ. ವಿವರ ಈ ಕೆಳಗಿನಂತಿರುತ್ತದೆ.

| ಕ್ರಸಂ | ಲೆಕ್ಕ ಶೀರ್ಷಿಕೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | 4215-02-800-0-02-132(ಯೋಜನೆ) ಬಂಡವಾಳ ವೆಚ್ಚ | ರೂ.1300.00 |

ಉಲ್ಲೇಖ (8) ರಲ್ಲಿ ಉಪ ನಿರ್ದೇಶಕರು ಕೆ.ಆರ್.ಐ.ಡಿ.ಎಲ್. ಚಿಕ್ಕೋಡಿ ಇವರು ರೂ.800.00 ಲಕ್ಷ, ಗೋಕಾಕ ಇವರು ರೂ.150.00 ಲಕ್ಷ ಹಾಗೂ ಕಿತ್ತೂರ ಇವರು ರೂ.350.00 ಲಕ್ಷ ಮತ್ತು ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ.ವಿಭಾಗ ಬೆಳಗಾವಿ ಇವರು ರೂ.1000.00 ಲಕ್ಷ, ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ.ವಿಭಾಗ ಚಿಕ್ಕೋಡಿ ಇವರು ರೂ.526.20 ಲಕ್ಷಗಳ ಬೇಡಿಕೆ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ರೂ.1300.00 ಲಕ್ಷ ಅನುದಾನವನ್ನು ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬೇಡಿಕೆಯ ಅನುಪಾತದಲ್ಲಿ ಬಿಡುಗಡೆ ಮಾಡುವುದು ಸೂಕ್ತವೆಂದು ಭಾವಿಸಿ ಈ ಕೆಳಗಿನಂತೆ ಆದೇಶಿಸಿದೆ.

# ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು 5 ನೇ ಸುವರ್ಣ ಗ್ರಾಮೋದಯ ಯೋಜನೆಯಡಿ ಸರ್ಕಾರದಿಂದ ಆಯ್ಕೆಯಾದ ಗ್ರಾಮಗಳಲ್ಲಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಉಪ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್, ಚಿಕ್ಕೋಡಿ ಇವರಿಗೆ ರೂ.428.00 ಲಕ್ಷ, ಗೋಕಾಕ ಇವರಿಗೆ ರೂ.69.00 ಲಕ್ಷ, ಕಿತ್ತೂರ ವರಿಗೆ ರೂ.161.00 ಲಕ್ಷ ಮತ್ತು ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ.ವಿಭಾಗ ಬೆಳಗಾವಿ ಇವರಿಗೆ ರೂ.400.00 ಲಕ್ಷ ಹಾಗೂ ಕಾರ್ಯಕಾರಿ ಅಭಿಯಂತರರು, ಪಂ .ರಾ. ಇಂ. ವಿಭಾಗ ಚಿಕ್ಕೋಡಿ ಇವರಿಗೆ ರೂ.242.00 ಲಕ್ಷ ಹೀಗೆ ಒಟ್ಟು ರೂ.1300.00 ಲಕ್ಷಗಳನ್ನು ಈ ಕೆಳಗಿನಂತೆ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

(ರೂ. ಲಕ್ಷಗಳಲ್ಲಿ)

| ಅ.ನಂ | ಅನುಷ್ಠಾನಾಧಿಕಾರಿಗಳ ಹೆಸರು | ಲೆಕ್ಕ ಶೀರ್ಷಿಕೆ | ಮೊತ್ತ |
|---|---|---|---|
| 1 | ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ.ವಿಭಾಗ ಬೆಳಗಾವಿ | 4215-02-800-0-02-132 (ಬಂಡವಾಳ ವೆಚ್ಚ) | 400.00 |
| | | **ಒಟ್ಟು** | **400.00** |
| 2 | ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ.ವಿಭಾಗ ಚಿಕ್ಕೋಡಿ | 4215-02-800-0-02-132 (ಬಂಡವಾಳ ವೆಚ್ಚ) | 242.00 |
| | | **ಒಟ್ಟು** | **242.00** |
| 3 | ಉಪ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್ ಚಿಕ್ಕೋಡಿ | 4215-02-800-0-02-132 (ಬಂಡವಾಳ ವೆಚ್ಚ) | 428.00 |
| | | **ಒಟ್ಟು** | **428.00** |
| 5 | ಉಪ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್ ಗೋಕಾಕ | 4215-02-800-0-02-132 (ಬಂಡವಾಳ ವೆಚ್ಚ) | 69.00 |
| | | **ಒಟ್ಟು** | **69.00** |
| 6 | ಉಪ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್ ಕಿತ್ತೂರ | 4215-02-800-0-02-132 (ಬಂಡವಾಳ ವೆಚ್ಚ) | 161.00 |
| | | **ಒಟ್ಟು** | **161.00** |
| | | **ಅಂತೂ ಒಟ್ಟು** | **1300.00** |

ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ ಇವರು ಈಗ ಬಿಡುಗಡೆ ಮಾಡಿದ ಅನುದಾನವನ್ನು ಮೇಲ್ಕಂಡಂತೆ ಉಪ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್ ಬೆಳಗಾವಿ, ಚಿಕ್ಕೋಡಿ, ಗೋಕಾಕ ಹಾಗೂ ಕಿತ್ತೂರ ಇವರಿಗೆ ಜಿಲ್ಲಾ ಖಜಾನೆಯಿಂದ ಪೇಯಿಸ್ ರಸೀದಿ CTS 8 ಮೂಲಕ ಡ್ರಾ ಮಾಡಿ ಕೂಡಲೇ ಸಂದಾಯ ಮಾಡಲು ಹಾಗೂ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ.ವಿಭಾಗ ಬೆಳಗಾವಿ ಹಾಗೂ ಚಿಕ್ಕೋಡಿ ಇವರಿಗೆ ನಿಯಮಾನುಸಾರ ಬಿಡುಗಡೆ ಮಾಡಲು ಆದೇಶಿಸಿದೆ.

**ಷರತ್ತುಗಳು:**

1. ಅನುಷ್ಠಾನಾಧಿಕಾರಿಗಳು ಈಗ ಬಿಡುಗಡೆ ಮಾಡಿದ ಅನುದಾನವನ್ನು ಸುವರ್ಣ ಗ್ರಾಮೋದಯ ಯೋಜನೆಯ ಖಾತೆಗೆ ಜಮೆ ತೆಗೆದುಕೊಳ್ಳಬೇಕು ಹಾಗೂ ಬಿಡುಗಡೆ ಮಾಡಿದ ಅನುದಾನವನ್ನು ಅನುಮೋದಿತ ಗ್ರಾಮಗಳ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು.
2. ಎಲ್ಲಾ ಕಾಮಗಾರಿಗಳನ್ನು ಸುವರ್ಣ ಗ್ರಾಮೋದಯ ಯೋಜನೆಯ ಸುತ್ತೋಲೆ ಹಾಗೂ ಮಾರ್ಗಸೂಚಿಯಂತೆ ನಿರ್ವಹಿಸತಕ್ಕದ್ದು.
3. ಪ್ರತಿ ಕಾಮಗಾರಿ ಮುಗಿದ ನಂತರ ಜಿಲ್ಲಾ ಪಂಚಾಯತ ನಿಯೋಜಿಸುವ ಅಧಿಕಾರಿಗಳಿಗೆ ಕಾಮಗಾರಿಯ ಭೌತಿಕ/ಆರ್ಥಿಕ ಬಿಲ್ಲು ಸಹಿತ ಅಗತ್ಯ ದಾಖಲೆಗಳೊಂದಿಗೆ ಪರಿಶೀಲನೆಗೆ ಹಾಜರಪಡಿಸತಕ್ಕದ್ದು.
4. ಚಾಲ್ತಿ ಕರ್ನಾಟಕ ಪಾರದರ್ಶಕ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
5. ಎಲ್ಲಾ ಕಾಮಗಾರಿಗಳ ವಿವರಗಳ ವಿವರಗಳನ್ನು ಕಡ್ಡಾಯವಾಗಿ ವರ್ಕಸಾಫ್ಟ್ ತತ್ರಾಂಶದಲ್ಲಿ ನಮೂದಿಸತಕ್ಕದ್ದು.

ಸಹಿ/-

(ದೀಪಾ ಚೋಳನ್)

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಜಿಲ್ಲಾ ಪಂಚಾಯತ ಬೆಳಗಾವಿ.

**ಪ್ರತಿಯನ್ನು ಮಾಹಿತಿ ಕುರಿತು ಆದರಗಳೊಂದಿಗೆ ಸಲ್ಲಿಸಿದೆ.**

1. ನಿರ್ದೇಶಕರು (ಗ್ರಾಮೂಸೌ) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು.

2. ಸಹಾಯಕ ಅಭಿವೃದ್ಧಿ ಆಯುಕ್ತರು ಹಾಗೂ ಪದನಿಮಿತ್ಯ ಸರ್ಕಾರದ ಅಧೀನ ಕಾರ್ಯದರ್ಶಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು.
3. ನಿರ್ದೇಶಕರು (ಸ್ವಉಕಾ) ಹಾಗೂ ಪದನಿಮಿತ ಸರಕಾರದ ಉಪ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು.
4. ಅಧ್ಯಕ್ಷರು ಜಿಲ್ಲಾ ಪಂಚಾಯತ ಬೆಳಗಾವಿ.
5. ಉಪಾಧ್ಯಕ್ಷರು ಜಿಲ್ಲಾ ಪಂಚಾಯತ ಬೆಳಗಾವಿ.

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1. ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ.
2. ಮುಖ್ಯ ಯೋಜನಾಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ.
3. ಉಪ ನಿರ್ದೇಶಕರು ಜಿಲ್ಲಾ ಖಜಾನೆ ಬೆಳಗಾವಿ.
4. ಕಾರ್ಯಕಾರಿ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ/ಚಿಕ್ಕೋಡಿ.
5. ಉಪ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್ ಬೆಳಗಾವಿ, ಚಿಕ್ಕೋಡಿ, ಗೋಕಾಕ ಹಾಗೂ ಕಿತ್ತೂರ ಇವರಿಗೆ.
6.

[ದೀಪ ಚೋಳನ್]
**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**
**ಜಿಲ್ಲಾ ಪಂಚಾಯತ ಬೆಳಗಾವಿ**